# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi

ವಿಜಯಪುರ ☎:08352-229051 www.kswu.ac.in **Fax: 08352 -229057**


ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್/2017-18/3600 ದಿನಾಂಕ:24-03-2018

**ಅಧಿಸೂಚನೆ**

**ವಿಷಯ:**- ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 28(1)(ಜಿ) ಅಡಿಯಲ್ಲಿ ಸಿಂಡಿಕೇಟ್ ಸದಸ್ಯರೆಂದು ನಾಮನಿರ್ದೇಶನ ಮಾಡುವ ಕುರಿತು.

**ಉಲ್ಲೇಖ:**-1.ಸರಕಾರದ ಪತ್ರ ಇಡಿ 121 ಎಂವಿವಿ 2017 ದಿನಾಂಕ:14-03-2018
2.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: **22-03-2018**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 28(1)(ಜಿ) ಅಡಿಯಲ್ಲಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಸಿಂಡಕೇಟ್‌ಗೆ ಸರಕಾರದಿಂದ ಈ ಕೆಳಕಂಡ ಸದಸ್ಯರನ್ನು ಉಲ್ಲೇಖ:1ರನ್ವಯ ದಿನಾಂಕ14-03-2018 ರಿಂದ ಅನ್ವಯವಾಗುವಂತೆ ಮೂರು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೇ ಅಲ್ಲಿಯವರೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 39(1)ರ ಉಪಬಂಧಕ್ಕೊಳಪಟ್ಟು ನಾಮನಿರ್ದೇಶನ ಮಾಡಲಾಗಿದೆ.

1. **ಶ್ರೀಮತಿ ಶಾಹಿಸ್ತ ಎಸ್ ಜಮಾದಾರ್**
   ನಂ:7 ಅನ್ನಪೂರ್ಣವಾಡಿ, ಬಾಕ್ಸೈಟ್ ರಸ್ತೆ
   **ಬೆಳಗಾವಿ- 590010.**

2. **ಡಾ.ಬೋರಮ್ಮ ಬಿನ್ ಬಲವಂತ ಪೊಲೀಸ್‌ಪಾಟೀಲ್,**
   ನಿವೃತ್ತ ಉಪನ್ಯಾಸಕರು, ಮುದ್ದೇಬಿಹಾಳ

3. **ಶ್ರೀ.ಎಂ.ಎಸ್.ಲಮಾಣಿ**
   ಗಣೇಶನಗರ, ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ.

4. **ಶ್ರೀಮತಿ ಲಕ್ಷ್ಮೀ ಶಾಂತಗೌಡ ದೇಸಾಯಿ**
   ದದಾಮಟ್ಟಿ, ವಿಜಯಪುರ.

5. **ಶ್ರೀಮತಿ ಸಾವಿತ್ರಿ ಮಜುಮದಾರ್,**
   ಹಿರೇಸಿಂದೋಗಿ, ಪೋಸ್ಟ್, ಕೊಪ್ಪಳ

6. **ಶ್ರೀಮತಿ ಸುಮನ**
   ಮೈಸೂರ

ಈ ಮೇಲ್ಕಂಡ ನಾಮನಿರ್ದೇಶನಗಳು ಉಲ್ಲೇಖಿತ ಸರಕಾರದ ಪತ್ರದಲ್ಲಿ ತಿಳಿಸಿರುವ ಹಾಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1) ನಾಮನಿರ್ದೇಶಿತ ಸದಸ್ಯರ ಸಾಮಾಜಿಕ ಮೀಸಲಾತಿಯ ಬಗ್ಗೆ ಒಂದು ತಿಂಗಳ ಒಳಗಾಗಿ ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿ/ಪ್ರಮಾಣೀಕರಿಸಿ ಪೂರಕ ದಾಖಲೆಗಳನ್ನು ಸರಕಾರಕ್ಕೆ ಸಲ್ಲಿಸತಕ್ಕದ್ದು.

2) ನಾಮನಿರ್ದೇಶಿತ ಸದಸ್ಯರು ಪಡೆದಿರುವ ಸ್ನಾತಕ/ಸ್ನಾತಕೋತ್ತರ ಪದವಿಗಳ ನೈಜತೆ/ಋಜುತ್ವದ ಬಗ್ಗೆ ಪದವಿ ಪಡೆದ ವಿಶ್ವವಿದ್ಯಾಲಯಗಳಿಂದ ದೃಢೀಕರಿಸಿದ ಕುರಿತು ಪ್ರಮಾಣ ಪತ್ರಗಳನ್ನು ಒಂದು ತಿಂಗಳೊಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಪ್ರಕರಣ 28(ಜಿ)ರ ಪರಂತುಕದಲ್ಲಿ ಗೊತ್ತುಪಡಿಸಿರುವಂತೆ, ನಾಮನಿರ್ದೇಶಿತ ಸದಸ್ಯರು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾನಿಲಯದ ಯಾವುದೇ ಸ್ಥಾನಮಾನದಲ್ಲಿ ನಿಯೋಜನೆ ಹೊಂದಿರುವ ಬಗ್ಗೆ ವಿಶ್ವವಿದ್ಯಾನಿಲಯವು ದೃಢೀಕರಿಸಿಕೊಂಡು ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

4) ನಾಮನಿರ್ದೇಶಿತ ವ್ಯಕ್ತಿಗಳು ಸಿಂಡಿಕೇಟ್ ಸದಸ್ಯರಾಗಿ ಮುಂದುವರೆಯುವುದು ಅವರ ಪದಾವಧಿಯಲ್ಲಿ ಸದ್ವರ್ತನೆ ತೋರುವ, ಸರ್ಕಾರದ ಕಾರ್ಯನೀತಿಗೆ ಬದ್ಧರಾಗಿರುವ ಹಾಗೂ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮತ್ತು ಸಾಂಸ್ಥಿಕ ಸ್ವಾಯತ್ತತೆ/ಸ್ವಾವಲಂಬಿತನವನ್ನು ಸುಸ್ಥಿರವಾಗಿ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ಷರತ್ತಿಗೊಳಪಟ್ಟಿರುತ್ತದೆ.

5) ಈ ಷರತ್ತುಗಳ ಪಾಲನೆಯಲ್ಲಿ ವಿಫಲತೆಯು ಸಿಂಡಿಕೇಟ್ ನಾಮನಿರ್ದೇಶನವನ್ನು ಪುನರಾವಲೋಕಿಸುವ ಅಥವಾ ಹಿಂಪಡೆಯುವ ಪರಿಣಾಮ ಹೊಂದಿರುತ್ತದೆ.

ಆದೇಶದ ಮೇರೆಗೆ

24/3

**ಕುಲಸಚಿವರು**

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ

**ಗೆ,**

**ಸಂಬಂಧಪಟ್ಟ ಸದಸ್ಯರುಗಳಿಗೆ**

**ಪ್ರತಿಗಳು:-**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001
2. ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001
3. ಎಲ್ಲ ಸಿಂಡಿಕೇಟ್ ಹಾಗೂ ಶೈಕ್ಷಣಿಕ ಪರಿಷತ್‌ನ ಸದಸ್ಯರು ಅಮವಿವಿ
4. ಆರ್ಥಿಕ ಅಧಿಕಾರಿಗಳು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ
5. ಉಪ-ಕುಲಸಚಿವರು(ಶೈಕ್ಷಣಿಕ)/ಆಡಳಿತ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ
6. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವರು(ಮೌ) ಇವರ ಆಪ್ತ ಶಾಖೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ
7. ಕಛೇರಿ ಪ್ರತಿ